ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು
ಚಲನಚಿತ್ರದ ಕೊನೆಯಲ್ಲಿ 'ಶುಭಂ' ಎಂದು ತೋರಿಸುವುದೇಕೆ ರಾಮ್‌ಜೀ?




ಕೆಲವು ಚಿತ್ರಗಳ ಬಗ್ಗೆಯಂತೂ ಅದನ್ನು ತೆಗೆದದ್ದೇ ಶುಶುದ್ಧ; ಭಂಭಂಡತನ ಎಂಬುದರ ಸೂಚಕ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ರಾಜಕೀಯದಲ್ಲಿ ಕಣ್ಣು ಮುಚ್ಚಿ ತಪ್ಪು ಮಾಡಿದರೆ?
ಅದು ಎಷ್ಟೋ ವಾಸಿ. ಹೆಚ್ಚಿನವರು ತಪ್ಪು ಮಾಡಿ (ಇತರರ ಮೇಲೆ) ಮಣ್ಣು ಮುಚ್ಚುವವರೇ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಕೋವಿಡ್ 19ಅನ್ನು ಮೀರಿಸುವ ರೋಗ ಮುಂದೆಂದಾದರೂ ಬರಬಹುದೆ?
ಈಗಲೇ ಬಂದಿವೆಯಲ್ಲಾ– 'ಬೆಡ್ ಬ್ಲಾಕ್', 'ಮೆಡಿಸನ್ ಬ್ಲಾಕ್', 'ಆಂಬುಲೆನ್ಸ್ ಬ್ಲಾಕ್' ರೋಗಗಳು.

ಡಾ. ವಿ. ಪುಗಳೇಂದಿ, ಬಳ್ಳಾರಿ
ಲಾಕ್‌ಡೌನ್ ಸಮಯದಲ್ಲಿ ಮದ್ಯಪ್ರಿಯರು ಗೋಡೌನ್ ಕಡೆಗೆ ಹೋಗುವುದೇಕೆ?




ಸೀಲ್‌ಡೌನ್ ಆಗಿರುವುದನ್ನು ಅನ್‌ಲಾಕ್ ಮಾಡಲು.

ಬಿ. ಚಂದ್ರೇಗೌಡ, ಬೆಂಗಳೂರು
ಜ್ಞಾನ ಸೌಂದರ್ಯಕ್ಕೂ, ಸೌಂದರ್ಯ ಜ್ಞಾನಕ್ಕೂ ಏನು ವ್ಯತ್ಯಾಸ?
ಇದು ಒಳಗಣ್ಣಿಗೆ ಸೊಗಸು, ಅದು ಹೊರಗಣ್ಣಿಗೆ ಸೊಗಸು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಇಂದು ಒಂದೇ ಮನೆಯಲ್ಲಿ ಒಂದಾಗಿ ಬಾಳಲು ಏಕೆ ಆಗುತ್ತಿಲ್ಲ ರಾಮ್‌ಜಿ?
ವರ್ಕ್ ಫ್ರಂ ಹೋಂ ಇರುವಾಗ ಮಿಕ್ಸಿ ಹಾಕಿದರೆ ಇರುವುದು ಕಷ್ಟವೇ.

ಕಾಳಿಹುಂಡಿ ಶಿವಕುಮಾರ್, ಮೈಸೂರು
ಓದುಗರ ಪ್ರಶ್ನೆಗಳೆಲ್ಲ ಸುಧಾ ಕಚೇರಿ ಸೇರಿದಾಗ ಅವುಗಳೆಲ್ಲ ಏನು ಮಾಡುತ್ತಿರುತ್ತವೆ?
'ಟಪಾಲಿನಿಂದ ಹೊರಬಿದ್ದು ಅಂಕಣದ ಪುಟ ಸೇರುವ ಭಾಗ್ಯ ಬೇಗ ಬರಲಿ' ಎಂದು ಪ್ರಾರ್ಥಿಸುತ್ತಿರುತ್ತವೆ.

ಬಾ.ರಂ. ಸುರೇಶ್, ಶಿವಮೊಗ್ಗ
ಇಷ್ಟೊಂದು ಪ್ರಸಿದ್ಧ ಜ್ಯೋತಿಷಿಗಳಿದ್ದರೂ ಯಾರೂ ಕೊರೊನಾದ ಮುನ್ಸೂಚನೆ ನೀಡಲಿಲ್ಲವಲ್ಲಾ...?
ಇವರು ನಂಬಿದ ಗ್ರಹಗಳಿಗೆ ವೂಹಾನ್ ಬಗ್ಗೆ ಊಹೆಯೂ ಇರಲಿಲ್ಲವಂತೆ.

ಬೂಕನಕೆರೆ ವಿಜೇಂದ್ರ, ಮೈಸೂರು
ಶ್ರೀಮಂತರೇ ಹೆಚ್ಚು ಸುಳ್ಳು ಹೇಳುತ್ತಾರಲ್ಲಾ...?
ಸಾಲ ಕೇಳುವವರಿಂದ ತಪ್ಪಿಸಿಕೊಳ್ಳಲು ಸುಳ್ಳಿನ ಗುಡ್ಡ ಅವಶ್ಯಕ.

ವಿಜಯಕುಮಾರ್ ಎಚ್.ಕೆ. ರಾಯಚೂರು
ನ್ಯೂಸ್‌ಗಿಂತ ನ್ಯೂಸ್ ಆ್ಯಂಕರ್ ಗಮನ ಸೆಳೆಯೋದು ಜಾಸ್ತಿ. ಏಕೆ ರಾಮ್?
ಸೈಲೆನ್ಸರ್ ಕಿತ್ತುಹೋದ ಬೈಕಿನಷ್ಟು ಸದ್ದು ಮಾಡುವುದರಿಂದ.

ರಾಜೀವ್ ಕುಮಾರ್, ದಾವಣಗೆರೆ
ಶಾಂತಿ, ಕ್ರಾಂತಿ, ಭ್ರಾಂತಿ; ಇವುಗಳ ವ್ಯತ್ಯಾಸ ತಿಳಿಸಿ...?
ಶಾಂತಿ ಎರಡು ಯುದ್ಧಗಳ ನಡುವಿನ ಕಾಲ; ಕ್ರಾಂತಿ ಸಾಮೂಹಿಕ ಹುಚ್ಚು; ಕ್ರಾಂತಿಯಿಂದ ಶಾಂತಿಯೆಂಬುದು ಭ್ರಾಂತಿ.

ಬಿದರಹಳ್ಳಿ ಐಶ್ವರ್ಯ, ಹಿರೇಹಡಗಲಿ
ಯೋಗಕ್ಕೂ, ಕ್ಷೇಮಕ್ಕೂ ಇರುವ ವ್ಯತ್ಯಾಸವೇನು?
ಕಾಳಜಿ ಇದ್ದರೆ ಕ್ಷೇಮ. ಕಾಳಜಿ ಇಲ್ಲದೆಯೂ ಕ್ಷೇಮವಾಗಿದ್ದರೆ ಯೋಗ.

ಬಿ.ಆರ್. ಉಷಾ, ಬೆಂಗಳೂರು
ನಿಮ್ಮ ಬ್ರೈನ್‌ಗೂ ವಿಶ್ವೇಶ್ವರಯ್ಯನವರ ಬ್ರೈನ್‌ಗೂ ವ್ಯತ್ಯಾಸ ಏನು ಗುರು?
ಅವರದು 'ಡಿಸ್ಕವರಿ ಚಾನಲ್'. ನನ್ನದು 'ಕಾಮೆಡಿ ಸೆಂಟ್ರಲ್'.

## ಬಹುಮಾನಿತ ಪ್ರಶ್ನೆ

ಟಿ.ಎಂ. ಮಾನಪ್ಪ, ಶಿವಮೊಗ್ಗ
ಎಲೆಮರೆ ಕಾಯಿ ಅಂತಾರಲ್ಲ, ಎಲೆಮರೆ ಹಣ್ಣು ಅನ್ನೋಲ್ಲವೇಕೆ?
ಹಣ್ಣಿನ ವಾಸನೆ ಹಿಡಿದು ಎಲೆಯನ್ನು ಸರಿಸಿಬಿಡುವರಲ್ಲಾ! ಮರೆ ಇರುವುದಿಲ್ಲ.

ಎನ್. ವೈದೇಹಿ, ಮೈಸೂರು
ಇಂಧನ ಮತ್ತು ನೀರು ಉಳಿಸಿ ಎನ್ನುವುದು ವಿಐಪಿಗಳಿಗೆ ಏಕೆ ಅನ್ವಯಿಸುವುದಿಲ್ಲ?
ಏಕೆಂದರೆ 'ವೆರಿ ಇರಿಟೇಟಿಂಗ್ ಪೀಪಲ್' ನಿಯಮ ಭಕ್ಷಕರು.

ಅನಸೂಯಾ ಟಿ, ಕೇದಿಗೆಮನೆ
ಚೀನಾದಿಂದ ಬರುವ ಮುಂದಿನ ವೈರಸ್ ಯಾವುದು?
'ತ್ರಿಶಿಶು ವೈರಸ್' ಎಂದು ಆಗಲೇ ಘೋಷಣೆಯಾಗಿದೆ.

ಅಶೋಕ್ ಹಾಲಣ್ಣನವರ್, ಲಕ್ಷ್ಮೇಶ್ವರ
ದೇವರ ಹತ್ತಿರ ಒಂದು ಸ್ಮಾರ್ಟ್ ಫೋನ್ ಇದ್ದಿದ್ದರೆ ಕೈಲಾಸದಲ್ಲಿ ಏನಾಗುತ್ತಿತ್ತು?



ವೇಸ್ಟ್ ಆಗುತ್ತಿತ್ತು. ಕೈಲಾಸದಲ್ಲಿ ಯಾವುದೇ ಕಂಪನಿಯ ನೆಟ್‌ವರ್ಕ್ ಇಲ್ಲ.

ರಾಂಚಂದ್ರ ಕೊಪ್ಪಲು, ತೀರ್ಥಹಳ್ಳಿ
ವಾರದ ಸಂತೆಗೂ, ನಿತ್ಯ ನಡೆಯುವ ಕಾಳಸಂತೆಗೂ ವ್ಯತ್ಯಾಸವೇನು?
ವಾರದ ಸಂತೆಯಲ್ಲಿ ಸದರ ಹೆಚ್ಚು; ಕಾಳಸಂತೆಯಲ್ಲಿ ದರ ಹೆಚ್ಚು.

ಅಕ್ಷರ ಸಾಹಿತ್ಯ ವೇದಿಕೆ, ಮಸ್ಕಿ
ನಮ್ಮೂರಲ್ಲಿ ಎಲೆಕ್ಷನ್ ಪ್ರಚಾರಕ್ಕೆ ಸಹಸ್ರಾರು ಜನ ಸೇರಿದಾಗ ಬರದ ಕೊರೊನಾ ತಿಂಗಳ ಮೇಲೆ ಬಂದಿದೆಯಲ್ಲಾ...?
ಚುನಾವಣಾ ಪ್ರಚಾರದಲ್ಲಿ ತನಗೆ ಪ್ರಚಾರ ಸಿಗಲಾರದೆಂಬ ಕಾರಣದಿಂದ ತಡೆದು ಬಂದಿತಂತೆ.

■ ರಾಮ್

ಪ್ರಶ್ನೆ ಕಳುಹಿಸಲು: editorsu@sudha.co.in